ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕ ಟ್ರಸ್ಟ್‌ನ

**ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಕೊಪ್ಪಳ**

"ಶಿಸ್ತಿನಿಂದ ಮಾತ್ರ ಉಚ್ಚ ಶೈಕ್ಷಣಿಕ ಮಟ್ಟ ಹಾಗೂ ಭವ್ಯ ಭವಿಷ್ಯತ್ತನ್ನು ನಿರ್ಮಿಸಬಲ್ಲದು"

---

## ಮುಚ್ಚಳಿಕೆ ಪತ್ರ

ಪ್ರಾಚಾರ್ಯರಿಗೆ,

ತಾವು ನೀಡಿರುವ ಮಹಾವಿದ್ಯಾಲಯದ ನಿಯಮಾವಳಿಗಳನ್ನು ನಾನು ಮತ್ತು ನನ್ನ ಮಗ/ಮಗಳು ತಪ್ಪದೇ ಪಾಲಿಸುತ್ತೇವೆ. ಯಾವುದೇ ನಿಯಮಾವಳಿಯನ್ನು ಹಾಗೂ ಕಾಲ ಕಾಲಕ್ಕೆ ನೀಡಬಹುದಾದ ನಿರ್ದೇಶನಗಳನ್ನು ಪಾಲಿಸುತ್ತೇವೆ. ಯಾವುದೇ ನಿಯಮಾವಳಿಯನ್ನು ಹಾಗೂ ಕಾಲ ಕಾಲಕ್ಕೆ ನೀಡಬಹುದಾದ ನಿರ್ದೇಶನಗಳನ್ನು ಪಾಲಿಸದಿದ್ದಲ್ಲಿ ತಾವು ತೆಗೆದುಕೊಳ್ಳುವ ಯಾವುದೇ ಕ್ರಮಕ್ಕೆ ಬದ್ಧರಾಗಿರುತ್ತೇವೆ.

ಪಾಲಕರ ಹೆಸರು ಮತ್ತು ಸಹಿ                                        ವಿದ್ಯಾರ್ಥಿಯ ಹೆಸರು ಮತ್ತು ಸಹಿ

---

## ಶ್ರೀ ಗವಿಸಿದ್ಧೇಶ್ವರ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಕೊಪ್ಪಳ

**ಶಿಸ್ತಿನ ನಿಯಮಾವಳಿಗಳು :**

1) ಮಹಾವಿದ್ಯಾಲಯದ ಪ್ರವೇಶಾತಿಯ ಸಂದರ್ಭದಲ್ಲಿ ಪ್ರವೇಶ ಅರ್ಜಿಯಲ್ಲಿ ನಮೂದಿಸಿದ ಹಾಗೂ ಪ್ರಾಚಾರ್ಯರು ನೀಡುವ ಎಲ್ಲ ಸೂಚನೆಗಳನ್ನು ಪಾಲಿಸುತ್ತೇವೆ.
2) ಮಹಾವಿದ್ಯಾಲಯದ ಆವರಣದಲ್ಲಿದ್ದಾಗ ಕಡ್ಡಾಯವಾಗಿ ಸಮವಸ್ತ್ರದೊಂದಿಗೆ ಪ್ರತಿ ವಿದ್ಯಾರ್ಥಿ ತನ್ನ ಜೊತೆಗೆ ಗುರುತಿನ ಪತ್ರ ಹಾಗೂ ಚೆಸ್ಟ ಕಾರ್ಡ ಇರಿಸಿಕೊಂಡಿರಬೇಕು. ತಪ್ಪಿದಲ್ಲಿ ಅವರನ್ನು ತಕ್ಷಣ ಹೊರ ಹಾಕಬಹುದಾಗಿದೆ. (ಹೊರಗಿನ ಅವಧಿಕೃತ ಪ್ರವೇಶ ತಪ್ಪಿಸಲು ಈ ಕ್ರಮ ಅಗತ್ಯವಾಗಿದ್ದಾಗಿದೆ)
3) ತರಗತಿ ನಡೆಯುವ ವೇಳೆಯಲ್ಲಿ ವಿದ್ಯಾರ್ಥಿಗಳು ಕಾಲೇಜಿನ ಆವರಣದಲ್ಲಿ ಹಾಗೂ ಕ್ಲಾಸ್ ರೂಮ್‌ಗಳ ಎದುರುಗಡೆ ತಿರುಗಾಡತಕ್ಕದಲ್ಲ ಮತ್ತು ಅಲ್ಲಿಯ ಶಾಂತತೆಗೆ ಭಂಗ ತರತಕ್ಕದ್ದಲ್ಲ. ತಮ್ಮ ವರ್ಗದ ಬಿಡುವಿನ ವೇಳೆಯಲ್ಲಿ ವಿದ್ಯಾರ್ಥಿಗಳು ಉಳಿದ ವರ್ಗಗಳ ಶಾಂತತೆಗೆ ಭಂಗ ಬಾರದಂತೆ ತಮಗೆ ಲಭ್ಯವಿರುವ ಆಟಗಳಲ್ಲಿ ಭಾಗವಹಿಸಬೇಕು. ಇಲ್ಲವೇ ಗ್ರಂಥಾಲಯಕ್ಕೆ ಹೋಗಿ ಸಮಯದ ಸದುಪಯೋಗ ಮಾಡಿಕೊಳ್ಳಬೇಕು.
4) ಯಾವುದೇ ವಿದ್ಯಾರ್ಥಿಯು ಕಾಲೇಜಿನ ಗೋಡೆಯ ಮೇಲಾಗಲಿ, ಪೀಠೋಪಕರಣಗಳ ಮೇಲಾಗಲಿ ಏನೂ ಬರೆಯತಕ್ಕದ್ದಲ್ಲ ಹಾಗೂ ವಿರೂಪಗೊಳಿಸತಕ್ಕದ್ದಲ್ಲ.
5) ಕಾಲೇಜಿನ ಆವರಣದಲ್ಲಿಯಾಗಲಿ ಅಥವಾ ಹೊರಗಡೆಯಗಲಿ ಯಾವುದೇ ವಿದ್ಯಾರ್ಥಿಯು ದುರ್ನಡತೆ ಕಂಡು ಬಂದಲ್ಲಿ ಶಿಸ್ತಿನ ಭಂಗವೆಂದು ಪರಿಗಣಿಸಿ, ಅಂತಹ ವ್ಯಕ್ತಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
6) ಯಾವುದೇ ವಿದ್ಯಾರ್ಥಿಯ ಬಗ್ಗೆ ಪ್ರಾಧ್ಯಾಪಕರು ಕೊಟ್ಟ ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುವದು ಹಾಗೂ ಅಂತಹ ವಿದ್ಯಾರ್ಥಿಗಳನ್ನು ಮಹಾವಿದ್ಯಾಲಯದಿಂದ ಹೊರಗೆ ಹಾಕಲೂಬಹುದು.
7) ಯಾವುದೇ ವಿದ್ಯಾರ್ಥಿಯು ತನ್ನದಲ್ಲದ ಅನ್ಯ ವರ್ಗಗಳಿಗೆ ಹಾಜರಾಗತಕ್ಕದ್ದಲ್ಲ.
8) ಕಾಲೇಜಿನ ಡ್ರೆಸ್ ಕೋಡ್ ಪ್ರಕಾರ ಸಾಮಾನ್ಯ ಉಡುಪು ಧರಿಸಬೇಕುಂಬ ನಿಯಮ ನಮಗೆ ತಿಳಿದಿರುತ್ತದೆ. (ವಿದ್ಯಾರ್ಥಿಗಳು ಪ್ಯಾಂಟ್ ಮತ್ತು ಶರ್ಟ್, ವಿದ್ಯಾರ್ಥಿನಿಯರಿಗೆ ಚೂಡಿದಾರ ಮತ್ತು ದುಪ್ಪಟ್ಟಾ) ವಿದ್ಯಾರ್ಥಿಗಳು ಜೀನ್ಸ್ ಪ್ಯಾಟ್, ಟಿ-ಶರ್ಟ್ ಮತ್ತು ವಿದ್ಯಾರ್ಥಿನಿಯರು ಸ್ಕರ್ಟ್ ಮತ್ತು ಜೀನ್ಸ್ ಪ್ಯಾಂಟ್ ಧರಿಸಬಾರದೆಂಬ ನಿಯಮ ನಮಗೆ ತಿಳಿದಿರುತ್ತದೆ.
9) ಕಾಲೇಜಿನ ಆವರಣದಲ್ಲಿ ಮೊಬೈಲ್ ನಿಷೇಧಿಸಲಾಗಿರುವದರಿಂದ ವಿದ್ಯಾರ್ಥಿಗಳು ಮಹಾವಿದ್ಯಾಲಯದ ಆವರಣಕ್ಕೆ ಮೊಬೈಲುಗಳನ್ನು ತೆಗೆದಿಕೊಂಡು ಹೋಗದಂತೆ ಪಾಲಕರು ನಿಗಾ ವಹಿಸಬೇಕು.
10) ಕಾಲೇಜಿನ ವೇಳಾಪಟ್ಟಿಯಲ್ಲಿ ಬದಲಾವಣೆಯಾದಲ್ಲಿ ಅದಕ್ಕೆ ನಮ್ಮ ಮಗ/ಮಗಳನ್ನು ಹೊಂದಿಕೊಳ್ಳುವಂತೆ ಮಾಡುವ ಜವಾಬ್ದಾರಿ ಪಾಲಕರದಾಗಿರುತ್ತದೆ.
11) ಸೈಕಲ್, ದ್ವಿಚಕ್ರ ವಾಹನಗಳನ್ನು ನಿಗದಿತ ಸ್ಥಳದಲ್ಲಿ ಮಾತ್ರ ನಿಲ್ಲಿಸಬೇಕು.

**ಹಾಜರಾತಿಯ ನಿಯಮಾವಳಿಗಳು :**

1) ವಿದ್ಯಾರ್ಥಿ/ವಿದ್ಯಾರ್ಥಿನಿಯರು ತಮ್ಮ ವೇಳಾ ಪತ್ರಿಕೆಯಂತೆ ಪ್ರತಿಯೊಂದು ಪಿರಿಯಡ್‌ಗೆ ಹಾಜರಾಗತಕ್ಕದ್ದು. ಹಾಜರಾತಿ ನಿಗದಿತ ಶೇಕಡಾವಾರು ಕಡಿಮೆಯಾದಲ್ಲಿ ಪಾಲಕರಿಗೆ ತಿಳಿಸುವದಲ್ಲದೇ ವಾರ್ಷಿಕ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗುವದಿಲ್ಲ.
2) ಪಾಲಕರು ಮಗ/ಮಗಳು ಕಾಲೇಜಿನಲ್ಲಿನ ಎಲ್ಲಾ ತರಗತಿಗಳಿಗೆ ತಪ್ಪದೇ ಹಾಜರಾಗುವಂತೆ ಜವಾಬ್ದಾರಿ ತೆಗೆದುಕೊಳ್ಳಬೇಕು.
   (ಎ) ಪಾಲಕರು ಮಗ/ಮಗಳಿಗೆ ಅನಾರೋಗ್ಯ ನಿಮಿತ್ಯ ರಜಾ ಬೇಕಾದ ಸಂದರ್ಭದಲ್ಲಿ ವೈದ್ಯಕೀಯ ಸರ್ಟಿಫಿಕೇಟ್‌ನ ಕಾನೂನಿನ ಅನುಗುಣವಾಗಿ ಅರ್ಜಿ ಸಲ್ಲಿಸಿ ರಜಾ ಪಡೆಯಬೇಕು.
   (ಬಿ) ಅನಿವಾರ್ಯ ಹಾಗೂ ತುರ್ತು ಸಂದರ್ಭದಲ್ಲಿ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಿ ಪೂರ್ವಾನುಮತಿ ಪಡೆದು ರಜಾ ಪಡೆಯಬೇಕು.

**ವಿದ್ಯಾರ್ಥಿ ಒಕ್ಕೂಟದ ನಿಯಮಾವಳಿಗಳು :**

1) ವಿದ್ಯಾರ್ಥಿ ಒಕ್ಕೂಟದ ಕಾರ್ಯದರ್ಶಿಗಳನ್ನು ಸದ್ಯದ ಸಂಪ್ರದಾಯದಂತೆ ಮೆರಿಟ್ (ಗರಿಷ್ಟ ಅಂಕಗಳ) ಆಧಾರವಾಗಿ ಆಯ್ಕೆಮಾಡಲಾಗುತ್ತಿದೆ. ಪರಿಸ್ಥಿತಿಗಳಗನುಗುಣವಾಗಿ ಪ್ರಾಧ್ಯಾಪಕ ವೃಂದವು ಪರ್ಯಾಯ ಸಮಂಜಸ ವಿಧಾನದಿಂದ ವಿದ್ಯಾರ್ಥಿಗಳ ಕಾರ್ಯದರ್ಶಿಗಳನ್ನು ಆಯ್ಕೆ ನಿರ್ಣಯಗಳನ್ನು ವಿದ್ಯಾರ್ಥಿಗಳು ಒಪ್ಪಬೇಕು.

ಅರ್ಜಿ ಸಂಖ್ಯೆ :

ಹೆಸರು ................................................ ತಂದೆಯ ಹೆಸರು ...........................................

ಆಧಾರ ಸಂಖ್ಯೆ. ........................................ ಮೊಬೈಲ್ ಸಂಖ್ಯೆ ..........................................

ವಿಳಾಸ.............................................................................................................................

.........................................................................................................................................

---

**ಪರೀಕ್ಷಾ ನಿಯಮಾವಳಿಗಳು :**

1) ವಿದ್ಯಾರ್ಥಿ/ವಿದ್ಯಾರ್ಥಿನಿಯರು ಕಾಲೇಜಿನ ಎಲ್ಲಾ ಪರೀಕ್ಷೆಗಳಿಗೆ ತಪ್ಪದೇ ಹಾಜರಾಗಬೇಕು. ಅನಿವಾರ್ಯ ಸಂದರ್ಭದಲ್ಲಿ ಪ್ರಾಚಾರ್ಯರ ಪೂರ್ವಾನುಮತಿಯನ್ನು ಪಡೆಯಬೇಕು. ಇಲ್ಲವಾದಲ್ಲಿ ಸಂಸ್ಥೆಯ ನಿಯಮ ಹಾಗೂ ತೀರ್ಮಾನಕ್ಕೆ ಬದ್ಧವಾಗಿರಬೇಕು.
2) ಕಾಲೇಜಿನಲ್ಲಿ ನಡೆಯುವ ಎಲ್ಲಾ ಮಾಸಿಕ, ತ್ರೈಮಾಸಿಕ, ಅರ್ಧವಾರ್ಷಿಕ, ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಮತ್ತು ಪ್ರಾಯೋಗಿಕ ಪರೀಕ್ಷೆಗಳಿಗೆ ಪಾಲಕರು ಮಗ/ಮಗಳು ಯಾವ ಕಾರಣಕ್ಕೂ ಗೈರು ಹಾಜರಾಗದೇ ಇರುವಂತೆ ಜವಾಬ್ದಾರಿ ತೆಗೆದುಕೊಳ್ಳಬೇಕು ಹಾಗೂ ಪಾಲಕರು ಮಗ/ಮಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಅಂಕಗಳನ್ನು ಪಡೆಯುವಂತೆ ನೋಡಿಕೊಳ್ಳಬೇಕು. ಟೆಸ್ಟ್ ಮತ್ತು ಪರೀಕ್ಷೆಗಳಿಗೆ ಗೈರುಹಾಜರಾದಲ್ಲಿ ಸಂಸ್ಥೆಯ ನಿಯಮಗಳಿಗೆ ಮತ್ತು ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ.

**ಕಾರ್ಯಾಲಯ, ಪ್ರಯೋಗಾಲಯ ಮತ್ತು ಗ್ರಂಥಾಲಯ ನಿಯಮಾವಳಿಗಳು :**

1) ಪ್ರತಿಯೊಬ್ಬ ವಿದ್ಯಾರ್ಥಿಯು ಗ್ರಂಥಾಲಯ ಮತ್ತು ಪ್ರಯೋಗಾಲಯಗಳಲ್ಲಿ ಶಿಸ್ತು ಶಾಂತತೆಯನ್ನು ಪಾಲಿಸಬೇಕು.
2) ಗ್ರಂಥಾಲಯ ಪುಸ್ತಕಗಳಿಗೆ ಯಾವುದೇ ರೀತಿಯಾದ ಹಾನಿ (ಪುಟಗಳನ್ನು ಹಾಗೂ ಚಿತ್ರಗಳನ್ನು ಹರಿದಲ್ಲಿ) ಅಂತಹ ವಿದ್ಯಾರ್ಥಿಗಳ ಮೇಲೆ ಉಗ್ರ ಕ್ರಮ ಕೈಗೊಳ್ಳಲಾಗುವುದು.
3) ಆಫೀಸಿನಲ್ಲಿ ಯಾವುದೇ ಮಾಹಿತಿಯನ್ನು ಪಡೆಯುವ ಸಂದರ್ಭದಲ್ಲಿ ಸೂಕ್ತ ದಾಖಲೆ ಹಾಗೂ ಗುರುತಿನ ಪತ್ರಗಳನ್ನು ನೀಡಿ ಸಿಬ್ಬಂದಿ ವರ್ಗದವರಿಗೆ ತೊಂದರೆಯಾಗದಂತೆ ವರ್ತಿಸಬೇಕು.
4) ವಿದ್ಯಾರ್ಥಿಗಳು ತಮ್ಮ ಸ್ಥಳೀಯ ವಿಳಾಸವನ್ನು ಆಫೀಸಿನಲ್ಲಿ ನೊಂದಾಯಿಸಬೇಕು. ಅದರಲ್ಲಿ ಯಾವುದೇ ಬದಲಾವಣೆಯಾದಲ್ಲಿ ಕೂಡಲೇ ಆಫೀಸಿಗೆ ತಿಳಿಸಬೇಕು.
5) ಕಾರ್ಯಲಯದಿಂದ ಹೊರಡಿಸಲಾಗುವ ಸೂಚನೆಗಳಿಗನುಗುಣವಾಗಿ ಸೂಕ್ತವಾದಂತಹ ದಾಖಲೆಗಳನ್ನು ನಿರ್ಧಿಷ್ಟ ದಿನಾಂಕದೊಳಗೆ ಸಲ್ಲಿಸಬೇಕು. ಅಂಕಪಟ್ಟಿ, ವರ್ಗಾವಣೆ ಪತ್ರ ಮತ್ತು ಇತರೆ ದಾಖಲೆಗಳನ್ನು ನಿರ್ಧಿಷ್ಟ ಕಾಲಮಿತಿಯೊಳಗೆ ಪಡೆಯಬೇಕು.
6) ಸರಕಾರ/ವಿಶ್ವವಿದ್ಯಾಲಯ ಹಾಗೂ ಮಂಡಳಿಗಳು ಹೊರಡಿಸುವ ಆದೇಶಗಳಿಗನುಗುಣವಾಗಿ ಪ್ರವೇಶಾತಿ, ಪರೀಕ್ಷೆ, ವಿದ್ಯಾರ್ಥಿ ವೇತನ, ಪರೀಕ್ಷಾ ಶುಲ್ಕಕ್ಕೆ ಸಂಬಂಧಿಸಿದ ಆದೇಶಗಳನ್ನು ವಿದ್ಯಾರ್ಥಿಗಳು ಪಾಲಿಸಬೇಕು.
7) ಸ್ಥಳೀಯವಾಗಿ ನಡೆಯುವ ತಾಲ್ಲೂಕು/ಜಿಲ್ಲಾ/ರಾಷ್ಟ್ರೀಯ ಮಟ್ಟದ ಕ್ರೀಡಾಕೂಟ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ, ಶೈಕ್ಷಣಿಕ ಪ್ರವಾಸ ಮುಂತಾದ ಕಾರ್ಯಕ್ರಮಗಳಿಗೆ ನಮ್ಮ ಮಗ/ಮಗಳನ್ನು ಕಳುಹಿಸಿಕೊಡಲು ಒಪ್ಪಿರುತ್ತೇನೆ. ಹೀಗೆ ಪಾಲ್ಗೊಂಡಾಗ ನಡೆಯಬಹುದಾದ ಅನಿರೀಕ್ಷಿತ ಹಾಗೂ ಆಕಸ್ಮಿಕ ಘಟನೆಗಳಿಗೆ ನಾವೇ ಜವಾಬ್ದಾರರಾಗುತ್ತೇವೆ.
8) ಪ್ರಯೋಗಿಕ ತರಗತಿಗಳ ರಿಕಾರ್ಡ, ಅಸಾಯನಮೆಂಟ್‌ಗಳನ್ನು ಸಕಾಲದಲ್ಲಿ ಸಲ್ಲಿಸಬೇಕು. ಪಾಲಕರು ಮಗ/ಮಗಳು ಈ ರಿಕಾರ್ಡಗಳನ್ನು ಸಲ್ಲಿಸದೇ ಇದ್ದಲ್ಲಿ ಆಗಬಹುದಾದ ನಷ್ಟಕ್ಕೆ ನಾವೇ ಜವಾಬ್ದಾರರಾಗಿರುತ್ತೇವೆ. ರೀಟೆಸ್ಟ ಮತ್ತು ಪರೀಕ್ಷೆಗಳಿಗೆ ತಪ್ಪದೇ ನಮ್ಮ ಮಗ/ಮಗಳನ್ನು ಕಳುಹಿಸಿಕೊಡುತ್ತೇವೆ.
9) ಕಾಲೇಜಿನಲ್ಲಿ ಪ್ರಯೋಗಾಲಯದ ಉಪಕರಣಗಳು, ಪೀಠೋಪಕರಣಗಳು ಮತ್ತು ಗ್ರಂಥಾಲಯದ ಪುಸ್ತಕಗಳು ಕಾಲೇಜಿನ ಕಟ್ಟಡ ಮುಂತಾದವುಗಳನ್ನು ನಮ್ಮ ಮಗ/ಮಗಳು ಹಾಳು ಮಾಡಿದಲ್ಲಿ ಸಂಬಂಧಿಸಿದ ನಷ್ಟವನ್ನು ನಾವೇ ಭರಿಸುತ್ತೇವೆ.

**ರ್‍ಯಾಗಿಂಗ್ ನಿಯಮಾವಳಿಗಳು :**

1) ಮಹಾವಿದ್ಯಾಲಯದಲ್ಲಿ ರ್‍ಯಾಗಿಂಗನ್ನು ನಿಷೇಧಿಸಲಾಗಿದೆ. (1982ರ ಕರ್ನಾಟಕ ಶಿಕ್ಷಣ ಅಧಿನಿಯಮದ 116ನೇ ಪ್ರಕರಣದಲ್ಲಿ ರ್‍ಯಾಗಿಂಗನಲ್ಲಿ ತೊಡಗುವವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ನಿಯಮದನ್ವಯ ರ್‍ಯಾಗಿಂಗ್ ಅಂದರೆ ಮಹಾವಿದ್ಯಾಲಯದ ಇತರ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಮೌಖಿಕ ದೈಹಿಕ ಹಾಗೂ ಮಾನಸಿಕ ಅಥವಾ ಇತರ ತೊಂದರೆ ಕೊಡುವುದು, ಚುಡಾಯಿಸುವದು, ಅವಾಚ್ಯ ಶಬ್ಧ ಉಪಯೋಗಿಸುವುದು ಮುಂತಾದವೇ ಆಗಿದೆ. ಈ ನಿಯಮಗನ್ನು ಉಲ್ಲಂಘಿಸುವಂತಹ ವ್ಯಕ್ತಿಗೆ ಒಂದು ವರ್ಷದ ಸಜೆ ಅಥವಾ ಎರಡು ಸಾವಿರ ರೂಪಾಯಿಗಳವರೆಗೆ ಜುಲ್ಮಾನೆ ಅಥವಾ ಎರಡನ್ನೂ ವಿಧಿಸಲು ಸುಸ್ಪಷ್ಟ ಅವಕಾಶವಿದೆ. ರ್‍ಯಾಗಿಂಗ್ ಪಿಡುಗು ಒಂದು ಕ್ರಿಮಿನಲ್ ಅಪರಾಧವಾಗಿದ್ದು, ಈ ದುಷ್ಕೃತ್ಯದಲ್ಲಿ ಭಾಗವಹಿಸುವ ವ್ಯಕ್ತಿಗಳನ್ನು ಕಾಲೇಜಿನಿಂದ ವಜಾ ಮಾಡಲಾಗುವದಲ್ಲದೇ ಕಾಲೇಜಿನ ಪ್ರಾಂಶುಪಾಲರು, ಆಯಾ ವಿಭಾಗದ ಪ್ರಾಧ್ಯಾಪಕರನ್ನು ಸಹ ಹೊಣೆಗಾರರನ್ನಾಗಿ ಮಾಡುವುದು ಅನಿವಾರ್ಯ ಎಂದು ಸರಕಾರ ಎಚ್ಚರಿಸಿದೆ. ಆದುದರಿಂದ ಯಾವುದೇ ವಿದ್ಯಾರ್ಥಿ ಇತರ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು ದೈಹಿಕವಾಗಿ ಇಲ್ಲವೇ ಮಾನಸಿಕವಾಗಿ ಪೀಡಿಸುವುದು ಅಕ್ಷಮ್ಯ ಅಪರಾಧವಾಗಿದೆ.